ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

NAAC Accredited with 'A' Grade-2014

ಪ್ರಸಾರಾಂಗ ವಿಭಾಗ

ದೂರವಾಣಿ : 0836-2215285

ಪಾವಟೆ ನಗರ ಧಾರವಾಡ-೫೮೦ ೦೦೩

ಕವಿವಿ/ಪ್ರಸಾರಾಂಗ/2026-2027/ 32 ದಿನಾಂಕ : 08-05-2026

: ಸುತ್ತೋಲೆ :

ಕ.ವಿ.ವಿ.ಸಂಲಗ್ನ ಮಹಾವಿದ್ಯಾಲಯಗಳಲ್ಲಿ ವ್ಯಾಸಂಗ ವಿಸ್ತರಣ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸುವ ಕುರಿತು..

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರ ಗಮನಕ್ಕೆ ತರಬಯಸುವುದೇನೆಂದರೆ ಕರ್ನಾಟಕ ವಿಶ್ವವಿದ್ಯಾಲಯ ಪ್ರತಿ ವರ್ಷದಂತೆ 2026-27 ನೇ ಸಾಲಿನಲ್ಲಿ ಪ್ರಸಾರಾಂಗವು ಗ್ರಾಮಾಂತರ ಪ್ರದೇಶಗಳಲ್ಲಿ ಜನಸಾಮಾನ್ಯರಿಗೆ ಉಪಯುಕ್ತವೆನಿಸುವ ವಿಷಯಗಳ ಬಗ್ಗೆ ವ್ಯಾಸಂಗ ವಿಸ್ತರಣ ಉಪನ್ಯಾಸ ಶಿಬಿರಗಳನ್ನು ತಮ್ಮ ಮಹಾವಿದ್ಯಾಲಯ, ಶಾಲಾ ಕಾಲೇಜು ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಏರ್ಪಡಿಸಲು ಇಚ್ಛಿಸುವವರು ಪ್ರಸಾರಾಂಗದ ನಿರ್ದೇಶಕರಿಗೆ ಪತ್ರದ ಮೂಲಕ ಮನವಿಯನ್ನು ಸಲ್ಲಿಸಬಹುದಾಗಿದೆ.

ಕ.ವಿ.ವಿ. ಸಂಲಗ್ನ ಮಹಾವಿದ್ಯಾಲಯಗಳ ಸಹಯೋಗದೊಂದಿಗೆ ಏರ್ಪಡಿಸುವ ವ್ಯಾಸಂಗ ವಿಸ್ತರಣ ಉಪನ್ಯಾಸ ಶಿಬಿರದಲ್ಲಿ ಉಪನ್ಯಾಸ ನೀಡಬಯಸುವ ಅಧ್ಯಾಪಕರು/ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು/ಸಹಾಯಕ ಪ್ರಾಧ್ಯಾಪಕರು/ ವಿದ್ವತ್ ಪರಿಣಿತರು ಉಪನ್ಯಾಸದ ವಿಷಯ ಹಾಗೂ ವಿಳಾಸದೊಂದಿಗೆ ನಿರ್ದೇಶಕರು ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - 580003 ಇವರಿಗೆ ದಿನಾಂಕ 30 ಜೂನ್ 2026 ರ ಒಳಗಾಗಿ ಇವರಿಗೆ ಮನವಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರಾದ ಡಾ.ಸಿದ್ದಪ್ಪ ಎನ್. ಇವರ ಮೊಬೈಲ್ ನಂ. 9480295866 ಗೆ ಸಂಪರ್ಕಿಸಬಹುದಾಗಿದೆ.

ನಿರ್ದೇಶಕರು
ಪ್ರಸಾರಾಂಗ 08/05/2026

ಪ್ರತಿ : 1) ಪ್ರಾಚಾರ್ಯರು, ಕರ್ನಾಟಕ ವಿಶ್ವವಿದ್ಯಾಲಯದ ಕಕ್ಷೆಯಲ್ಲಿ ಬರುವ ಎಲ್ಲ ಅಧೀನ/ಸಂಲಗ್ನ ಮಹಾವಿದ್ಯಾಲಯಗಳು

2) ನಿರ್ದೇಶಕರು, ಐ.ಟಿ.ವಿಭಾಗ, ಕ.ವಿ.ವಿ.ಧಾರವಾಡ(ಸುತ್ತೋಲೆಯನ್ನು ಅಂತರ್ಜಾಲದಲ್ಲಿ ಅಪ್‌ಲೋಡ್ ಮಾಡಲು ಕೋರಿದೆ)